ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಾಗಲಕೋಟ-587103

ದೂರವಾಣಿ ಸಂಖ್ಯೆ:08354-235091/235092 ಫ್ಯಾಕ್ಸ ನಂ:08354-235092/235096

ಕ್ರ:ಕಂಶಾ:ಎಲ್ಎಕ್ಯೂ:ಸಿಆರ್-22/2016-17 ಬಾಗಲಕೋಟ ದಿ: 30-05-2018

## ಸಾರ್ವಜನಿಕ ಪ್ರಕಟಣೆ

ಬಾಗಲಕೋಟ ಜಿಲ್ಲೆಯ ಬದಾಮಿ ನಗರಕ್ಕೆ ಮಂಜೂರಾದ ಕೇಂದ್ರ ಪುರಸ್ಕೃತ "ಹೃದಯ" ಯೋಜನೆಯಡಿಯಲ್ಲಿ ನಿರ್ಮಿಸಲಿರುವ ಪಾರ್ಕಿಂಗ್ ಪ್ಲಾಜಾ ಕಾಮಗಾರಿಗಾಗಿ ಅವಶ್ಯವಿರುವ ಬದಾಮಿ ಗ್ರಾಮದ ಒಟ್ಟು 3-18ಎ/ಗು ಜಮೀನು ಭೂಸ್ವಾಧೀನವಾಗಲಿದ್ದು, ಸದರಿ ಜಮೀನಿಗೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ -2013" ಹಾಗೂ "ಕರ್ನಾಟಕ ರಾಜ್ಯ ಭೂಸ್ವಾಧೀನ ನಿಯಮಗಳು 2015"ರನ್ವಯ ಹಮ್ಮಿಕೊಂಡ ಸಾಮಾಜಿಕ ಪರಿಣಾಮ ನಿರ್ಧರಣೆಯ ಅಧ್ಯಯನದ ವರದಿಯ ಬಗ್ಗೆ ಸರಕಾರದ ಆದೇಶ ಸಂಖ್ಯೆ:ಕಂಇ 18 ಎಲ್ಆರ್ಆರ್ 2017 ದಿನಾಂಕ:24-02-2018ರನ್ವಯ ರಚಿಸಿದ ತಜ್ಞರ ಸಮಿತಿಯು ದಿನಾಂಕ:17-04-2018ರಂದು ಕ್ಷೇತ್ರ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಸದರಿ ದಿನದಂದು ಈ ಬಗ್ಗೆ ಜರುಗಿದ ಸಭೆಯಲ್ಲಿ ತಜ್ಞರ ಸಮಿತಿಯು ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿದ್ದು ಇರುತ್ತದೆ.

1) ಪ್ರಸ್ತಾಪಿತ ಜಮೀನು ಬದಾಮಿ ನಗರಕ್ಕೆ ಸಮೀಪವಿದ್ದು, ಬದಾಮಿ ನಗರದ ಸುತ್ತಲಿನ 5 ಕಿಮೀ ವ್ಯಾಪ್ತಿಯಲ್ಲಿನ ದರಗಳನ್ನು ಪರಿಗಣಿಸಬಹುದಾಗಿದೆ.
2) ಪ್ರಸ್ತಾಪಿತ ಸ್ವಾಧೀನಪಡಿಸಿಕೊಳ್ಳುವ ಭೂ ಪ್ರದೇಶದಲ್ಲಿ ಶೆಡ್(ತಗಡಿನ)ಗಳನ್ನು ಹೊಂದಿರುವ 32 ಮನೆಗಳಿದ್ದು ಹೆಚ್ಚಿನ ಹಾನಿಗೊಳಗಾಗಬಹುದಾದ ಪಕ್ಕಾ ಕಟ್ಟಡಗಳು ಇರುವುದಿಲ್ಲ.
3) ಭೂಸ್ವಾಧೀನಗೊಳ್ಳುವ ಪ್ರದೇಶ ಹಾಗೂ ಮೇಣಬಸದಿಗಳ ಮುಖ್ಯ ದ್ವಾರದ ನಡುವೆ ಕೆಲವೊಂದು ಪಕ್ಕಾ ಕಟ್ಟಡಗಳು ಬರುತ್ತಿದ್ದು, ಅವುಗಳು ಬದಾಮಿ ಪುರಸಭೆಯ ಮುಖಾಂತರ ಹಂಚಿಕೆಯಾದ ಆಶ್ರಯ ಮನೆಗಳಿದ್ದು, ಅಲ್ಲಿ ವಾಸಿಸಿರುವ ನಾಗರಿಕರನ್ನು ಬೇರೆಡೆ ಮನೆಗಳನ್ನು ನೀಡಿ ಸ್ಥಳಾಂತರಿಸಲಾಗುವುದೆಂದು ಪರಿವೀಕ್ಷಣೆಯಲ್ಲಿ ಹಾಜರಿದ್ದ ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿರುತ್ತಾರೆ. ಈ ವಿಷಯವು ವರದಿಯಲ್ಲಿ ನಮೂದಿಸಿರುವುದಿಲ್ಲ.
4) ಭೂಸ್ವಾಧೀನಗೊಳ್ಳುವ ಪ್ರದೇಶವು ಖಾಸಗಿ ಕೃಷಿ ಜಮೀನು ಇದ್ದು, ವಾಸ್ತವವಾಗಿ ಯಾವುದೇ ಬೆಳೆಗಳು ಇರುವುದಿಲ್ಲ. ನಿವಾಸಿಗಳು ಅನಧಿಕೃತವಾಗಿ ಶೆಡ್‌ಗಳನ್ನು ಹಾಕಿಕೊಂಡಿರುತ್ತಾರೆ.
5) ಪಾರ್ಕಿಂಗ್ ಪ್ಲಾಜಾಗಳನ್ನು ನಿರ್ಮಿಸಲು ಯೋಜನೆಗಳನ್ನು ಹಾಕಿಕೊಂಡಿರುವ ಕುರಿತು ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ.
6) ಅನಧಿಕೃತ ಕಟ್ಟಡಗಳು ಇರುವುದರಿಂದ ಯಾವುದೇ ಪುನರವಸತಿ ಸೌಲಭ್ಯಗಳನ್ನು ಕಲ್ಪಿಸಲು ಬರುವುದಿಲ್ಲವೆಂದು ವರದಿಯಲ್ಲಿ ನಮೂದಿಸಿದ್ದರೂ ಅಲ್ಲಿರುವ ಜನರನ್ನು ಒಕ್ಕಲೆಬ್ಬಿಸುತ್ತಿದ್ದರಿಂದ ಯೋಜನಾ ಬಾಧಿತ ಸಂತ್ರಸ್ಥರೆಂದು ಪರಿಗಣಿಸಿ ಆಧ್ಯತೆಯ ಮೇಲೆ ನಿವಾಸಿಗಳಿಗೆ ಸ್ಥಳಾಂತರ ಸೌಲಭ್ಯ ಕಲ್ಪಿಸಬೇಕೆಂದು ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿತು.
7) ಅಂತರ ರಾಷ್ಟ್ರೀಯ ಖ್ಯಾತಿಯ ಮೇಣಬಸದಿಗೆ ಸಂಪರ್ಕ ಕಲ್ಪಿಸುವ ಪಾರ್ಕಿಂಗ್ ಪ್ರದೇಶ ಮತ್ತು ಕೂಡು ರಸೆಗಾಗಿ ಯೋಜನೆಯನ್ನು ಹಾಕಿಕೊಂಡಿದ್ದು, ಸುತ್ತಮುತ್ತಲಿನ ಎಪಿಎಂಸಿ ಹಾಗೂ ಸರಕಾರಿ ಜಾಗೆಯ ಒತ್ತುವರಿಗೆ ಒಳಗಾಗಿ ಭೂಸ್ವಾಧೀನ ಪ್ರದೇಶ ಹೊರತುಪಡಿಸಿ ಉಳಿದೆಡೆ ಶೆಡ್‌ಗಳು ಮತ್ತು ಗುಡಿಸಲುಗಳು ಇರುವುದರಿಂದ ಅಂತರ ರಾಷ್ಟ್ರೀಯ ಪ್ರವಾಸಿಗರಿಗೆ ಆಕರ್ಷಣೀಯ ಅನಿಸವಾಗಿಲ್ಲದ್ದರಿಂದ ಸುತ್ತಮುತ್ತಲಿನ ಒತ್ತುವರಿಗಳನ್ನು ತೆರುವುಗೊಳಿಸಿ ಸೌಂದರ್ಯಕರಣ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಲು ಕೂಡಾ ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿತು.

8) ಸದರಿ ಭೂಸ್ವಾಧೀನಗೊಳ್ಳುವ ಪ್ರದೇಶದ ಪಾರ್ಕಿಂಗ್ ಪ್ಲಾಜಾಗೆ ರಾಜ್ಯ ಹೆದ್ದಾರಿಯಿಂದ ಸೂಕ್ತ ರೀತಿಯ ಕೂಡು ರಸ್ತೆಯನ್ನು ಪ್ರಸ್ತಾಪಿಸಲು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ. ಸಧ್ಯದ ಪ್ರಸ್ತಾವನೆ ಸೂಕ್ತವಾಗಿಲ್ಲವೆಂದು ಅನಿಸಿಕೆ ವ್ಯಕ್ತಪಡಿಸುತ್ತಾ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವುದು ಸೂಕ್ತವೆನಿಸುತ್ತದೆ.

9) ಈ ಯೋಜನೆ ಕೈಗೊಳ್ಳುವುದರಿಂದ ಸಾಮಾಜಿಕ ಪರಿಣಾಮ ಹಾಗೂ ಸಂಭವನೀಯ ಲಾಭಗಳ ಬಗ್ಗೆ ವರದಿಯಲ್ಲಿ ವಿಸ್ತೃತವಾಗಿ ಪ್ರಸ್ತಾಪಿಸುವ ಬಗ್ಗೆ ಸಲಹೆ ನೀಡಲಾಯಿತು.

10) ಈ ಭೂಸ್ವಾಧೀನ ಪ್ರದೇಶ ಒಳಗೊಂಡಂತೆ ಪಾರ್ಕಿಂಗ ಪ್ಲಾಜಾ ನಿರ್ಮಿಸಲು ಬೇರೆ ಪ್ರದೇಶಗಳು ಲಭ್ಯವಿಲ್ಲದಿರುವುದರಿಂದ ಸದರಿ ಭೂಸ್ವಾಧೀನವನ್ನು ಕೈಕೊಳ್ಳುವ ಅನಿವಾರ್ಯ ಮತ್ತು ಸೂಕ್ತವೆಂದು ಸಮಿತಿ ಅಭಿಪ್ರಾಯಪಟ್ಟಿದೆ.

ತಜ್ಞರ ಸಮಿತಿಯು ಈ ಮೇಲಿನಂತೆ ಮಾಡಿದ ಶಿಫಾರಸ್ಸುಗಳನ್ನು ಭೂಸ್ವಾಧೀನವಾಗಲಿರುವ ಜಮೀನುಗಳ ಭೂಮಾಲೀಕರ ಹಾಗೂ ಇತರೆ ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ತರಲಾಗಿದೆ.

ಅಪರ ಜಿಲ್ಲಾಧಿಕಾರಿಗಳು 30/07/2014
ಬಾಗಲಕೋಟ

ಪ್ರತಿಗಳು:

1)ಉಪವಿಭಾಗಾಧಿಕಾರಿಗಳು ಬಾಗಲಕೋಟ ಇವರಿಗೆ

1/-ಸದರಿ ಸಾರ್ವಜನಿಕ ಪ್ರಕಟಣೆಯನ್ನು ವಿವಿಧ ಸ್ಥಳಗಳಲ್ಲಿ ಪ್ರಕಟ/ಪ್ರಸಿದ್ಧಿಪಡಿಸಲು ನಿಯಮಾನುಸಾರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

181/2

2)ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್‌ಆಯ್‌ಸಿ ಬಾಗಲಕೋಟ ಇವರಿಗೆ

1/- ಸದರಿ ಸಾರ್ವಜನಿಕ ಪ್ರಕಟಣೆಯನ್ನು ನಿಯಮಾನುಸಾರ ಜಿಲ್ಲಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

3) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಬಾಗಲಕೋಟ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

4)ತಹಶೀಲದಾರ ಬದಾಮಿ ಇವರಿಗೆ ಮಾಹಿತಿ ಹಾಗೂ ನಿಯಮಾನುಸಾರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

5)ಮುಖ್ಯಾಧಿಕಾರಿಗಳು, ಪುರಸಭೆ ಬದಾಮಿ ಇವರಿಗೆ ಮಾಹಿತಿ ಹಾಗೂ ನಿಯಮಾನುಸಾರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

6)ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬಾಗಲಕೋಟ ಇವರಿಗೆ.

1/-ಈ ಕುರಿತು ಅಧಿಕೃತ ಎರಡು ಜಿಲ್ಲಾ ಮಟ್ಟದ ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು ಸೂಕ್ತ ಕ್ರಮಕೈಗೊಳ್ಳುವುದು. ಪ್ರಕಟಣೆಯ ನಂತರ ಅದರ ಮೊತ್ತವನ್ನು ಸಂದಾಯ ಮಾಡಲಾಗುವುದು.

ಅಪರ ಜಿಲ್ಲಾಧಿಕಾರಿಗಳು 30/07/2014
ಬಾಗಲಕೋಟ